– –

**ಅಸಲು ದಾವಾ ನಂಃ91/2014**
**ಪಿ.ಡಬ್ಲ್ಯೂಃ01**

**ದಿನಾಂಕಃ13–01–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ ಎಸ್., ಪ್ರತಿವಾದಿಗಳ ಪರ ವಕೀಲರಿಂದ**

24. ನಿಪಿಃ35 ರ ದಾಖಲೆಯನ್ನು ಪ್ರತಿವಾದಿಯರಿಗೆ ಸೇರಿದ ದಾವಾ ಷೆಡ್ಯೂಲ್ ಸ್ವತ್ತನ್ನು ಅಕ್ರಮವಾಗಿ ಲಪಟಾಯಿಸುವ ದುರುದ್ದೇಶದಿಂದ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾವು ವಾದಿಗಳು ಅಸಾದಿ ವಂಶಸ್ಥರು ಮತ್ತು ಪ್ರತಿವಾದಿಗಳು ಚೌಡಿಕೆ ವಂಶಸ್ಥರು ಎಂದರೆ ಸಾಕ್ಷಿಯು ಅಸಾದಿ ಮತ್ತು ಚೌಡಿಕೆ ಎರಡು ಒಂದೇ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಾದಿ ವಂಶಸ್ಥರ ಕುಲ ಪ್ರವೃತ್ತಿ ತಪ್ಪಡೆ ವಾದ್ಯ ನುಡಿಸುವುದು ಎಂದರೆ ಸರಿಯಲ್ಲ. ಅಸಾದಿ ವಂಶಸ್ಥರು ಎಂದರೆ ದೇವರ ಮುಂದೆ ಹಲಿಗೆ ವಾದ್ಯ ನುಡಿಸುವವರು ಎಂದರ್ಥ. ನಾವು ಚೌಡಿಕೆ ವಾದ್ಯವನ್ನು ನುಡಿಸುತ್ತೇವೆ. ಚೌಡಿಕೆಯನ್ನು ಅಸಾದಿ ಎಂತಲೂ ಸಹ ನಮ್ಮ ಕಡೆ ಕರೆಯುತ್ತಾರೆ. ಅಸಾದಿ ವಂಶಸ್ಥರನ್ನು ಚೌಡಿಕೆ ವಂಶಸ್ಥರು ಎಂದು ಸಹ ಕರೆಯುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

25. ಪ್ರತಿವಾದಿಗಳು ಚೌಡಿಕೆ ವಂಶಸ್ಥರು ಎಂದರೆ ಸರಿ. ಪ್ರತಿವಾದಿಗಳ ಕುಲ ಪ್ರವೃತ್ತಿ ಚೌಡಿಕೆ ವಾದ್ಯ ಬಾರಿಸುವುದು ಎಂದರೆ ಸರಿ. ಹಾಗಾಗಿ ಅಸಾದಿ ವಂಶವೇ ಬೇರೆ ಮತ್ತು ಚೌಡಿಕೆ ವಂಶವೇ ಬೇರೆ ಎಂದರೆ ಸರಿಯಲ್ಲ. ವಾದಿಗಳು ಪ್ರತಿವಾದಿಗಳ ವಂಶಸ್ಥರಲ್ಲ ಎಂದರೆ ಸರಿಯಲ್ಲ. ಜಯಣ್ಣ ಬಿನ್ ರಾಮಚಂದ್ರಪ್ಪ ಎಂದರೆ ನಾನೇ. ವಾದಿಯು ದಿಃ29–11–2018 ರಂದು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿ ನಂ.3 ಮತ್ತು ಅದಕ್ಕೆ ಲಗತ್ತಿರುವ ಪ್ರಮಾಣಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದು ನಾನು ಪ್ರಮಾಣಿಕರಿಸಿರುವ ಪತ್ರ ಎಂದು ನುಡಿಯುತ್ತಾರೆ. ನಾನು ಸದರಿ ಅರ್ಜಿಯನ್ನು ವಾದ ಪತ್ರದ ತಿದ್ದುಪಡಿಗಾಗಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮಧ್ಯಂತರ ಅರ್ಜಿ ನಂ.3 ರ 1 ರಿಂದ 3 ರ ಷೆಡ್ಯೂಲ್ ನ್ನು ಓದಿ ಹೇಳಿ ಅದರ ಪ್ರಕಾರ ವಾದ ಪತ್ರದ ತಿದ್ದುಪಡಿಯನ್ನು ನೀವು ಕೇಳಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಧ್ಯಂತರ ಅರ್ಜಿ ನಂ.3 ಕ್ಕೆ ಪ್ರತಿವಾದಿಗಳು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ12–04–2019 ರಂದು ಒಂದು ಮೆಮೋವನ್ನು ಸಲ್ಲಿಸಿ ಅರ್ಜಿ ಸಂಖ್ಯೆ–3 ನ್ನು ನಗಣ್ಯ ಮಾಡಬೇಕಾಗಿ ಕೋರಿಕೊಂಡು ಅದರಂತೆ ಮಧ್ಯಂತರ ಅರ್ಜಿ ಸಂಖ್ಯೆ–3 ವಿಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ ನಂ.3 ರಲ್ಲಿ ಷೆಡ್ಯೂಲ್ –3 ರಲ್ಲಿ ನಮೂದಿಸಿರುವ ಆಸ್ತಿಯಾದ ಬುರುಜನರೊಪ್ಪ ಗ್ರಾಮದ ಸರ್ವೇ ನಂ.204 ನ್ನು ವಾದ ಪತ್ರದಲ್ಲಿ ಸೇರಿಸದ ಕಾರಣ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

26. ಮೂಲಪುರುಷ ಗಂಗಾರವರಿಗೆ ತಿಪ್ಪಗ, ಕೊಲ್ಲಾರಪ್ಪ, ಪರಸಪ್ಪ, ತಿಮ್ಮಯ್ಯ ಮತ್ತು ಯಲ್ಲಪ್ಪ ಎಂದು 5 ಮಕ್ಕಳು ಇದ್ದಾರೆ ಎಂದು ಸುಳ್ಳಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ

ಸುಳ್ಳಾಗಿ ಬರೆಸಲಾಗಿದೆ ಎಂದರೆ ಸರಿಯಲ್ಲ. ಮೂಲಪುರುಷ ಗಂಗನಿಗೆ ಓಬಮ್ಮ ಮತ್ತು ಬುಡ್ಡಜ್ಜಿ ಅಂತ ಇಬ್ಬರು ಪತ್ನಿಯರು ಇರುವುದಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಬರೆಸಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದ ಮೊದಲನೆ ಪುಟದ ಕೊನೆಯ ಪ್ಯಾರಾ, ಎರಡನೇ ಪುಟದ ಮೊದಲನೇ ಪ್ಯಾರಾದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

27. ತಿಪ್ಪಗ ಬಿನ್ ಗಂಗ ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿಯವರನ್ನು ನಾನು ನೋಡಿಲ್ಲ. ಮೂಲಪುರುಷ ಗಂಗ ಹಾಗು ಅವರ ಧರ್ಮ ಪತ್ನಿ ಬಸವ್ವ ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ. ಸದರಿಯವರನ್ನು ನಾನು ನೋಡಿಲ್ಲ. ತಿಪ್ಪಗರವರ ಹೆಂಡತಿಯರಾದ ಓಬಮ್ಮ ಮತ್ತು ಬುಡ್ಡಜ್ಜಿರವರನ್ನು ನಾನು ನೋಡಿರುತ್ತೇನೆ. ಓಬಮ್ಮರವರು ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ. ಬುಡ್ಡಜ್ಜಿರವರು 1983 ರಲ್ಲಿ ಮರಣ ಹೊಂದಿರುತ್ತಾರೆ. ಓಬಮ್ಮರವರಿಗೆ ಯಲ್ಲಪ್ಪ ಎಂಬ ಒಬ್ಬನೇ ಮಗನಿರುತ್ತಾನೆ. ಓಬಮ್ಮನಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ಯಲ್ಲಪ್ಪನ ಹೆಂಡತಿಯ ಹೆಸರು ಲಕ್ಷ್ಮಮ್ಮ. ಯಲ್ಲಪ್ಪ ಮತ್ತು ಲಕ್ಷ್ಮಮ್ಮರವರನ್ನು ನಾನು ನೋಡಿರುತ್ತೇನೆ. ಸದರಿಯವರಿಬ್ಬರ ಮರಣದ ದಿನಾಂಕ ನನಗೆ ಗೊತ್ತಿಲ್ಲ. ಸದರಿಯವರಿಬ್ಬರು ಮರಣ ಹೊಂದಿದಾಗ ನನ್ನ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ. ಯಲ್ಲಪ್ಪ ಮತ್ತು ಲಕ್ಷ್ಮಮ್ಮರವರಿಗೆ ನಷ್ಟ ಸಂತತಿ ಎಂದರೆ ಸರಿಯಲ್ಲ. ಯಲ್ಲಪ್ಪ ಮತ್ತು ಲಕ್ಷ್ಮಮ್ಮರವರಿಗೆ ನಷ್ಟ ಸಂತತಿ ಇದ್ದರು ಸಹ 1 ರಿಂದ 3 ನೇ ವಾದಿಗಳನ್ನು ಸುಳ್ಳಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ತಿಪ್ಪಗರವರಿಗೆ ಓಬಮ್ಮ ಎಂಬ ಒಬ್ಬಳೇ ಹೆಂಡತಿ ಎಂದರೆ ಸರಿಯಲ್ಲ. ತಿಪ್ಪಗ ಬಿನ್ ಗಂಗರವರಿಗೆ ಬುಡ್ಡಜ್ಜಿ ಎಂಬ ಎರಡನೇ ಹೆಂಡತಿಯಿದ್ದು, ಅವರಿಗೆ ರಾಮಚಂದ್ರ ಅಂತ ಮಗ ಇದ್ದಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ತಿಪ್ಪಗರವರಿಗೆ ಬುಡ್ಡಜ್ಜಿ ಎಂಬ ಎರಡನೇ ಹೆಂಡತಿ ಇರುವ ಸಬೂತಿಗಾಗಿ ಯಾವುದೇ ದಾಖಲೆಗಳು ಲಭ್ಯವಿಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

28. 1 ರಿಂದ 3 ನೇ ವಾದಿಗಳು ಯಲ್ಲಪ್ಪನ ಮಕ್ಕಳೆಂದು, 4 ರಿಂದ 6 ನೇ ವಾದಿಗಳು ರಾಮಚಂದ್ರಪ್ಪನ ಬಿನ್ ತಿಪ್ಪಗರವರ ಮಕ್ಕಳು ಎಂದು ಸುಳ್ಳಾಗಿ ಸೇರಿಕೊಂಡು ನಿಪಿಃ35 ರ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 6 ನೇ ವಾದಿಗಳು ಬುರುಜನರೊಪ್ಪ ಗ್ರಾಮದಲ್ಲಿ ಸುಮಾರು 80 ವರ್ಷಗಳಿಂದಲೂ ವಾಸ ಇದ್ದೇವೆ ಎಂದರೆ ಸರಿ. ನಾವು ಬುರುಜನರೊಪ್ಪ ಗ್ರಾಮದಲ್ಲಿ ವಾಸ ಇದ್ದ ಕಾರಣ ಹಾಗೂ ಸದರಿ ಗ್ರಾಮದಲ್ಲಿ ನಮ್ಮಗಳ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲದ ಕಾರಣ ಹಳೆಯ ಸರ್ವೇ ನಂ.137, ಹೊಸ ಸರ್ವೇ ನಂ.204 ರ ಜಮೀನು ತಿಪ್ಪಯ್ಯ ಅಸಾದಿ ಬಿನ್ ಗಂಗರವರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ತಿಪ್ಪಯ್ಯ ಅಸಾದಿ ಬಿನ್ ಗಂಗಪ್ಪರವರಿಗೆ ಜಮೀನು

ಮಂಜೂರಾಗಿದ್ದು ಎಂದರೆ ಸಾಕ್ಷಿಯು ಸರಿ ಎಂದು ನುಡಿದು, ಮುಂದುವರೆದು ಪುನಃ ಸುಳ್ಳು ಎಂದು ನುಡಿಯುತ್ತಾರೆ.

29. 1 ರಿಂದ 6 ನೇ ವಾದಿಗಳು ರಾಮಜೋಗಿಹಳ್ಳಿಯ ವಾಸಿಗಳು ಎಂದು ತೋರಿಸಲು ಪಡಿತರ ಚೀಟಿಯಾಗಲೀ, ಚುನಾವಣಾ ಗುರುತಿನ ಚೀಟಿಯಾಗಲೀ ಬೇರೆ ಯಾವುದೇ ದಾಖಲೆಗಳಾಗಲೀ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. 1 ರಿಂದ 6 ನೇ ವಾದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ ವಾಸ ಬುರುಜನರೊಪ್ಪ ಎಂದು ನಮೂದು ಇದೆ ಎಂದರೆ ಸಾಕ್ಷಿಯು 4 ರಿಂದ 6 ನೇ ವಾದಿಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಮಾತ್ರ ವಾಸ ಬುರುಜನರೊಪ್ಪ ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. 1 ರಿಂದ 3 ನೇ ವಾದಿಗಳು ಕೆನ್ನಡಲು ಗ್ರಾಮದಲ್ಲಿ ವಾಸ ಇರುತ್ತಾರೆ. ಕೆನ್ನಡಲು ಗ್ರಾಮ ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ, ಇಂಗಳದಾಳು ಗ್ರಾಮ ಪಂಚಾಯಿತಿಗೆ ಸೇರುತ್ತದೆ. ತಿಪ್ಪಗರವರ ಕಾಲದಿಂದಲೂ 1 ರಿಂದ 3 ನೇ ವಾದಿಗಳು ಇಂಗಳದಾಳು ಗ್ರಾಮ ಪಂಚಾಯಿತಿಯಿಂದ ಮತ್ತು 4 ರಿಂದ 6 ನೇ ವಾದಿಗಳು ಐಮಂಗಲ ಹೋಬಳಿ, ಬುರುಜನರೊಪ್ಪ ಗ್ರಾಮ ಪಂಚಾಯಿತಿಯಿಂದ ಸರ್ಕಾರಿ ಸೌಲಭ್ಯವನ್ನು ಪಡೆಯುತ್ತಿದ್ದೇವೆ ಎಂದರೆ ಸರಿ.

30. ನಿಪಿಃ35 ರ ಛಾಪಾ ಕಾಗದವನ್ನು ಚಳ್ಳಕೆರೆ ತಾಲ್ಲೂಕು ಕಚೇರಿಯಲ್ಲಿ ಖರೀದಿಸಲಾಗಿದೆ. ನಿಪಿಃ35 ರ ಛಾಪಾ ಕಾಗದವನ್ನು ನಮ್ಮ ಅಣ್ಣ ತಿಪ್ಪೇಸ್ವಾಮಿಯವರು ಖರೀದಿಸಿದ್ದು, ಈಗ ಪೌತಿಯಾಗಿರುತ್ತಾರೆ ಹಾಗಾಗಿ ಇದರ ಸಂಬಂಧ ಹೆಚ್ಚಿನ ವಿಚಾರ ನನಗೆ ಗೊತ್ತಿಲ್ಲ. ಸದರಿ ತಿಪ್ಪೇಸ್ವಾಮಿ ಎಂದರೆ 5 ನೇ ವಾದಿ ಎಂದರೆ ಸರಿ. ಸದರಿಯವರು ಭರಮಸಾಗರದಲ್ಲಿ ಶಿಕ್ಷಕರಾಗಿದ್ದು, ವಾದಿಗಳ ಪೈಕಿ ಅವರೇ ವಿದ್ಯಾವಂತರು ಮತ್ತು ಲೋಕ ಜ್ಞಾನ ಉಳ್ಳವರು ಎಂದರೆ ಸರಿ. ಸದರಿಯವರು ಭರಮಸಾಗರದಲ್ಲಿ 15 ವರ್ಷಗಳ ಕಾಲ ಶಿಕ್ಷಕರಾಗಿದ್ದು ಸೇವೆ ಸಲ್ಲಿಸಿರುತ್ತಾರೆ. ಸದರಿಯವರು ಮೊದಲು ಕಸವನಹಳ್ಳಿ ಮತ್ತು ನಂತರ ಭರಮಸಾಗರದಲ್ಲಿ ಕರ್ತವ್ಯ ನಿರ್ವಹಿಸಿದ್ದು, ಭರಮಸಾಗರದಲ್ಲಿ ನಿವೃತ್ತಿಯಾಗಿರುತ್ತಾರೆ. ನಿಪಿಃ35 ರ ಛಾಪಾ ಕಾಗದ ಕೊಂಡುಕೊಂಡ ದಿನಾಂಕ ನನಗೆ ಗೊತ್ತಿಲ್ಲ. ಮತ್ತು ನಿಪಿಃ35 ರ ಛಾಪಾ ಕಾಗದವನ್ನು ಯಾರ ಹೆಸರಿಗೆ ಖರೀದಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿಃ35 ರ ಛಾಪಾ ಕಾಗದದ ಮೇಲೆ ಪ್ರಮಾಣಪತ್ರ ಮುದ್ರಿಸಿದ್ದು, ಯಾರು ಪ್ರಮಾಣಿಕರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿಃ35 ರಲ್ಲಿ ಬರೆದಿರುವ ಅಂಶಗಳೆಲ್ಲವನ್ನು 5 ನೇ ವಾದಿ ಬರೆಸಿರುತ್ತಾರೆ ಎಂದರೆ ಸರಿ. ದಿಃ23-04-2014 ರಂದು ಸದರಿ ದಾವೆಯನ್ನು ಹೂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ದಾವೆಯನ್ನು ಹೂಡಲು ವಕೀಲರಿಗೆ ಮಾಹಿತಿಯನ್ನು 5 ನೇ ವಾದಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರು ಸೇರಿ ಮಾಹಿತಿಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿಃ35 ರ ದಾಖಲೆಯು ದಿಃ15-12-2015 ರಂದು ಪ್ರಮಾಣಿಕರಿಸಲಾಗಿದೆ ಸಾಕ್ಷಿಯು ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ.

31. ನಿಪಿಃ35 ರಲ್ಲಿ ಹೇಳಿದಂತೆ ನನ್ನ ಗ್ರಾಮದ ರಾಮಜೋಗಿಹಳ್ಳಿ ಎಂದು ತೋರಿಸಿ ಹಾಲಿ ವಾಸ ಬುರುಜನರೊಪ್ಪ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. 1 ರಿಂದ 3 ನೇ ವಾದಿಗಳ ಗ್ರಾಮ ನಿಪಿಃ35 ರಲ್ಲಿ ನಮೂದಾಗಿಲ್ಲ ಎಂದರೆ ಸರಿ. ರಾಮಜೋಗಿಹಳ್ಳಿ ಗ್ರಾಮದ ವಾಸಿಗಳಾಗದಿದ್ದರೂ ಸಹ ದಾವಾ ಹೂಡಿದ ನಂತರ ಚಳ್ಳಕೆರೆ ತಾಲ್ಲೂಕು ತಹಶಿಲ್ದಾರವರೊಂದಿಗೆ ಷರೀಕಾಗಿ ನಿಪಿಃ34 ಮತ್ತು ನಿಪಿಃ35 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದ ಮೊದಲನೆ ಪುಟದಿಂದ ಎರಡನೇ ಕೊನೆಯ ಪ್ಯಾರಾ, ಎರಡನೇ ಪುಟದ ಮೊದಲನೇ ಪ್ಯಾರಾದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

32. ಮೂಲಪುರುಷ ಗಂಗರವರ ಮೊದಲನೆ ಮಗ ತಿಪ್ಪಗ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಂಶದ ಬಗ್ಗೆ ತಿಳಿದಿಲ್ಲ ಮತ್ತು ಗಂಗರವರ ಮೊದಲನೆ ಮಗ ಕೊಲ್ಲಾರಪ್ಪ ಎಂದರೆ ಸರಿಯಲ್ಲ. ಕೊಲ್ಲಾರಪ್ಪರವರಿಗೆ ಲಕ್ಷ್ಮಕ್ಕ ಅಂತ ಹೆಂಡತಿ ಇದ್ದಳು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಯಲ್ಲಮ್ಮ ಎಂಬ ಹೆಣ್ಣು ಮಗಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ.  ಕೊಲ್ಲಾರಪ್ಪ, ಅವನ ಹೆಂಡತಿ ಲಕ್ಷ್ಮಕ್ಕ ಮತ್ತು ಅವರಿಬ್ಬರ ಮಗಳು ಯಲ್ಲಮ್ಮ ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿಃ35 ರಲ್ಲಿ ಕೊಲ್ಲಾರಪ್ಪರವರ ಹೆಂಡತಿ ಹಿರಿಯವ್ವ ಎಂದು ಮತ್ತು ಸದರಿಯವರಿಗೆ ನಷ್ಟ ಸಂತತಿ ಎಂದು ಸುಳ್ಳಾಗಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ.

33. ಮೂಲಪುರುಷ ಗಂಗರವರ ಮೂರನೇ ಮಗ ಪರಸಪ್ಪ ಎಂದರೆ ಸರಿ. ಸದರಿಯವರ ಹೆಂಡತಿಯ ಹೆಸರು ಹಿರಿಯಮ್ಮ ಎಂದರೆ ಸರಿಯಲ್ಲ. ಪರಸಪ್ಪರವರ ಮಗನ ಹೆಸರು ತಿಮ್ಮಯ್ಯ ಎಂದರೆ ಸರಿ. ತಿಮ್ಮಯ್ಯನ ಹೆಂಡತಿಯ ಹೆಸರು ದುರ್ಗಮ್ಮ ಮತ್ತು ಮಗನ ಹೆಸರು ತಿಪ್ಪೇಸ್ವಾಮಿ ಎಂದರೆ ಸರಿ. ತಿಮ್ಮಯ್ಯ ಮತ್ತು ದುರ್ಗಮ್ಮರವರಿಗೆ ಪಾಪಮ್ಮ, ತಿಮ್ಮಕ್ಕ, ನಿಂಗಮ್ಮ, ಸಾಂತಮ್ಮ ಮತ್ತು ಯಲ್ಲಮ್ಮ ಎಂಬ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಗಂಗನ 4 ನೇ ಮಗನ ತಿಮ್ಮಯ್ಯ ಯಾನೆ ಚಕ್ಕುಲಿ ತಿಮ್ಮಯ್ಯರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಮೊದಲನೆ ಹೆಂಡತಿ ಹನುಮಕ್ಕ ಎಂದರೆ ಸರಿಯಲ್ಲ. ತಿಮ್ಮಯ್ಯನನ್ನು ನಾನು ನೋಡಿಲ್ಲ. ತಿಮ್ಮಯ್ಯನ ಮೊದಲನೆ ಹೆಂಡತಿಗೆ ನಷ್ಟ ಸಂತತಿ ಇದ್ದು, ಪೌತಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.  ತಿಮ್ಮಯ್ಯನ ಎರಡನೇ ಹೆಂಡತಿ ಯಲ್ಲಮ್ಮನಿಗೆ 7 ಜನ ಮಕ್ಕಳಿದ್ದು, ಅವರುಗಳೆಂದರೆ ನಿಂಗಮ್ಮ, ಚಂದ್ರಮ್ಮ, ಗೋವಿಂದಪ್ಪ, ರಾಮಚಂದ್ರಪ್ಪ, ತಿಪ್ಪಯ್ಯ, ತಿಮ್ಮಕ್ಕ, ಸಾಕಮ್ಮ ಎಂದರೆ ಸರಿ. ಇವರುಗಳಲ್ಲಿ ಗೋವಿಂದಪ್ಪ, ರಾಮಚಂದ್ರಪ್ಪ ಮತ್ತು ತಿಪ್ಪಯ್ಯರವರನ್ನು ಮಾತ್ರ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ. ಉಳಿದ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ತಿಪ್ಪೇಸ್ವಾಮಿಯವರ

ಸಹೋದರಿಯರನ್ನು, ತಿಮ್ಮಯ್ಯ ಹಾಗೂ ಯಲ್ಲಮ್ಮರವರ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೆ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿಯು ಅವರುಗಳನ್ನು ಮದುವೆ ಮಾಡಿಕೊಟ್ಟಿದ್ದರಿಂದ ಸೇರಿಸಿಲ್ಲ ಎಂದು ನುಡಿಯುತ್ತಾರೆ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.